VK ಕೃಷಿ ಮಣ್ಣಿನ ಮಕ್ಕಳ ಮನದ ಮಾತು

ರೈತ ಮಿತ್ರ

ಸಹವರ್ತಿ ತೋಟಗಾರಿಕೆ ಬೆಳೆ

ಸಹವರ್ತಿ ತೋಟಗಾರಿಕೆ ಬೆಳೆಗಳು ಬೆಳವಣಿಗೆಯನ್ನು ಹೆಚ್ಚಿಸಲು, ಕೀಟಗಳನ್ನು ತಡೆಯಲು, ಮಣ್ಣಿನ ಆರೋಗ್ಯವನ್ನು ಸುಧಾರಿಸಲು ಮತ್ತು ಇಳುವರಿಯನ್ನು ಹೆಚ್ಚಿಸಲು ಕೆಲವು ಸಸ್ಯಗಳನ್ನು ಒಟ್ಟಿಗೆ ಬೆಳೆಯುವುದನ್ನು ಒಳಗೊಂಡಿರುತ್ತವೆ. ಉದಾಹರಣೆಗೆ, ಬೀನ್ಸ್ ಮತ್ತು ಜೋಳ. ಜೋಳವು ಬೀನ್ಸ್ ಮೇಲೆ ಏರಲು ನೈಸರ್ಗಿಕ ಬೆಂಬಲ ರಚನೆಯನ್ನು ಒದಗಿಸುತ್ತದೆ. ಬೀನ್ಸ್ ಮಣ್ಣಿನಲ್ಲಿ ಸಾರಜನಕವನ್ನು ಸ್ಥಿರೀಕರಿಸುತ್ತದೆ. ಇದು ಎರಡೂ ಸಸ್ಯಗಳಿಗೆ ಪ್ರಯೋಜನವನ್ನು ನೀಡುತ್ತದೆ. ಮಣ್ಣಿಗೆ ಹೊದಿಕೆಯನ್ನು ಒದಗಿಸಲು ಮತ್ತು ಕಳೆಗಳನ್ನು ನಿಗ್ರಹಿಸಲು ಕುಂಬಳಕಾಯಿಯನ್ನು ಸಹ ಬೆಳೆಯುತ್ತಾರೆ. ಇದು 'ತ್ರೀ ಸಿಸ್ಟರ್ಸ್' ವಿಧಾನದ ಭಾಗವಾಗಿದೆ. ಅಂತೆಯೇ ಟೊಮೆಟೊಗಳೊಂದಿಗೆ ತುಳಸಿಯನ್ನು ನೆಟ್ಟಾಗ ಹಣ್ಣುಗಳ ಪರಿಮಳವನ್ನು ಸುಧಾರಿಸುತ್ತದೆ ಮತ್ತು ಗಿಡ ಹೇನುಗಳು ಮತ್ತು ಬಿಳಿ ನೊಣಗಳ ಹಾವಳಿಯನ್ನು ತಡೆಯುತ್ತದೆ. ಚಂಡು ಹೂವುಗಳು ಟೊಮೆಟೊಗಳಿಗೆ ಪ್ರಯೋಜನಕಾರಿ ಸಂಗಾತಿಗಳಾಗಿವೆ. ಏಕೆಂದರೆ ಅವುಗಳ ಕಟುವಾದ ಪರಿಮಳವು ಜಂತುಹುಳುಗಳು ಮತ್ತು ಬಿಳಿ ನೊಣಗಳನ್ನು ಹಿಮ್ಮೆಟ್ಟಿಸಲು ಸಹಾಯ ಮಾಡುತ್ತದೆ. ಅದೇ ರೀತಿ, ಕ್ಯಾರೆಟ್‌ಗಳು ಈರುಳ್ಳಿ, ಜತೆಯಲ್ಲಿ ಚೆನ್ನಾಗಿ ಬೆಳೆಯುತ್ತವೆ. ಏಕೆಂದರೆ ಈರುಳ್ಳಿಯ ಬಲವಾದ ಪರಿಮಳವು ಕ್ಯಾರೆಟ್ ಬೇರು ನೊಣವನ್ನು ತಡೆಯಲು ಸಹಾಯ ಮಾಡುತ್ತದೆ. ಮೂಲಂಗಿಗಳು ಕ್ಯಾರೆಟ್ ಬೆಳೆಗೆ ಸಂರಕ್ಷಣಾ ಬೆಳೆಯಾಗಿ ಅವುಗಳನ್ನು ಕಾಡುವ ನೊಣಗಳನ್ನು ಮುಖ್ಯ ಬೆಳೆಯಿಂದ ದೂರ ಸೆಳೆಯುವ ಕೆಲಸ ಮಾಡುತ್ತದೆ.

ಕೆಲವು ಸಸ್ಯಗಳನ್ನು ಒಟ್ಟಿಗೆ ನೆಡುವಾಗ ಪರಸ್ಪರ ನಕಾರಾತ್ಮಕ ಕ್ರಿಯೆಗಳು ಉಂಟಾಗುವುದರಿಂದ ಅವುಗಳನ್ನು ತಪ್ಪಿಸಬೇಕು. ಉದಾಹರಣೆಗೆ, ಆಲೂಗಡ್ಡೆಯ ಬಳಿ ಟೊಮೆಟೊಗಳನ್ನು ನೆಡಬಾರದು, ಏಕೆಂದರೆ ಎರಡೂ ಒಂದೇ ಜಾತಿಯ ಬೆಳೆಗಳಾಗಿದ್ದು ಒಂದೇ ರೀತಿಯ ರೋಗಗಳಿಗೆ ಗುರಿಯಾಗುತ್ತವೆ. ಅದೇ ರೀತಿ, ಪೋಲ್ ಬೀನ್ಸ್ ಅನ್ನು ಟೊಮೆಟೊ ಅಥವಾ ಫೆನ್ನೆಲ್ (ಸೋಂಪು) ಬಳಿ ಬೆಳೆಸಬಾರದು. ಒಟ್ಟಾರೆಯಾಗಿ, ಒಡನಾಡಿ ತೋಟಗಾರಿಕೆಯು ಹೆಚ್ಚು ಸ್ಥಿತಿಸ್ಥಾಪಕ ಮತ್ತು ಉತ್ಪಾದಕ ಪರಿಸರ ವ್ಯವಸ್ಥೆಯನ್ನು ರಚಿಸಲು ನೈಸರ್ಗಿಕ ಸಸ್ಯ ಸಂವಹನಗಳನ್ನು ಬಳಸಿಕೊಳ್ಳುತ್ತದೆ.

-ಡಾ. ಬದರಿ ಪ್ರಸಾದ್ ಪಿ.ಆರ್.

ಜೋಮಿ ಅಣ್ಣನ ಹಣ್ಣಿನ ತೋಟ

ಕೃಷಿ ಕ್ಷೇತ್ರದಲ್ಲಿ ವಿಭಿನ್ನ ಹೆಜ್ಜೆ ಇಟ್ಟ ಎಂಬಿಎ ಪದವೀಧರ ಜೋಮಿ ಮ್ಯಾಥ್ಯೂ ಅಪರೂಪದ ಸಾಧನೆ

■ **ಆರ್.ಎನ್. ಮೂರ್ತಿ** ಶಿವಮೊಗ್ಗ

ಸ್ಥಳೀಯ ವಲಯದಲ್ಲಿ ಜೋಮಿ ಅಣ್ಣ ಎಂದೆ ಅಕ್ಕರೆಯಿಂದ ಕರೆಸಿಕೊಳ್ಳುವ ಶಿವಮೊಗ್ಗದ ಜೋಮಿ ಮ್ಯಾಥ್ಯೂ ಅವರದು ಕೃಷಿ ಕ್ಷೇತ್ರದಲ್ಲಿ ಅಪರೂಪದ ನೋಟ, ಸಂಪೂರ್ಣ ಭಿನ್ನ ಹೆಜ್ಜೆ.

ಬಹುತೇಕ ರೈತರು ತರ್ಕಿಸದೆ ಇರುವಂತಹ ತವಕಗಳನ್ನು ಒಡಲೊಳಗಿಟ್ಟುಕೊಂಡ ಉತ್ಸಾಹದ ನಡೆ. ಎಂಬಿಎ ಪದವೀಧರರಾದ ಜೋಮಿ ಮ್ಯಾಥ್ಯೂ ದೃಢ ಚಿತ್ತದಿಂದ ಆಯ್ದುಕೊಂಡದ್ದು ಕೃಷಿ ಕ್ಷೇತ್ರವನ್ನು. ದುಡಿಮೆಯ ಪ್ರತಿ ಹಂತದಲ್ಲೂ ಕರಾರುವಾಕ್ ನೀತಿಯ ಪರಿಣಾಮ ಇಂದು ದೇಶದ ವಿರಳ ಜಾತಿಯ, ಬಹು ಬೇಡಿಕೆಯ ಹಣ್ಣುಗಳ ಉತ್ಪಾದಕರಲ್ಲಿ ಪ್ರಮುಖ ಸ್ಥಾನದಲ್ಲಿ ಗುರುತಿಸಿಕೊಂಡಿದ್ದಾರೆ. ವಿದೇಶಗಳಿಗೆ ಅಪರೂಪದ ಹಣ್ಣುಗಳನ್ನು ರಫ್ತು ಮಾಡಲು ಸಹಕಾರಿಯಾಗಿದ್ದಾರೆ.

ಕಳೆದ 28 ವರ್ಷಗಳ ಇವರ ಸತತ ಕೃಷಿ ಧ್ಯಾನ, ಬೆಳೆ ವೈವಿಧ್ಯೀಕರಣ ಅಭಿವೃದ್ಧಿ ಪಥದಲ್ಲಿ ಬೀಸುಗಾಲು ಹಾಕಲು ನೆರವಾಗಿದೆ. ಶಿವಮೊಗ್ಗ ಜಿಲ್ಲೆಯ ಒಟ್ಟು 5 ಕಡೆ ತೋಟಗಳನ್ನು ನಿರ್ವಹಿಸುತ್ತಿದ್ದು, ಸಂಬಾರು ಬೆಳೆಗಳ ಜತೆಗೆ ಹಣ್ಣುಗಳ ಉತ್ಪಾದನೆಗೆ ಒತ್ತು ನೀಡಿದ್ದಾರೆ. ಜಿಲ್ಲೆಯ ರಿಪ್ಪನ್ ಪೇಟೆ, ಆನಂದಪುರಂ, ಸಾಗರ ಸಮೀಪ, ಭದ್ರಾವತಿ ತಾಲೂಕು ಬಿಆರ್ ಪಿ ಹಾಗೂ ಶಿವಮೊಗ್ಗ ಸಮೀಪದ ಅಬ್ಬಲಗೆರೆಯಲ್ಲಿ ತೋಟಗಳ ಕಟ್ಟಿದ್ದಾರೆ. ಇದರಲ್ಲಿ ಕೆಲವು ಮೂಲತಃ ಇವರ ಸ್ವಂತ ಜಮೀನು, ಎರಡು ಕಡೆ ಗುತ್ತಿಗೆಗೆ ಪಡೆದಿದ್ದಾರೆ.

ತೋಟಗಳಲ್ಲಿ ಬೆಳೆ ವೈವಿಧ್ಯತೆಗೆ ಆದ್ಯತೆ ನೀಡಿದ್ದೇನೆ. ಅಡಕೆ ಆಹಾರ ಬೆಳೆ ಅಲ್ಲದೆ ಇರುವುದು ಮತ್ತು ಬೆಲೆ ಅನಿಶ್ಚಿತತೆ ಕಾರಣ ಹೆಚ್ಚಿನ ಒತ್ತು ನೀಡಲು ಇಷ್ಟವಾಗಿಲ್ಲ.
-ಜೋಮಿ ಮ್ಯಾಥ್ಯೂ, ಶಿವಮೊಗ್ಗ

ಜೋಮಿ ಮ್ಯಾಥ್ಯೂ ಅವರ ತೋಟದಲ್ಲಿರುವ ಪ್ರಮುಖ ಬೆಳೆಗಳು ಕಾಳುಮೆಣಸು, ಕಾಫಿ, ರಬ್ಬರ್, ಕೋಕೊ, ತೆಂಗು. ಉಳಿದಂತೆ ಸ್ವಲ್ಪ ಭಾಗ ಅಡಕೆ. ವಿರಳ ಜಾತಿಯ ಅಪರೂಪದ ಹಣ್ಣುಗಳಾದ ಪ್ಯಾಶನ್ ಫ್ರೂಟ್, ಮ್ಯಾಂಗೊಸ್ಟೀನ್, ಅವಕಾಡು, ರಾಂಬುಟಾನ್, ದೂರಿಯಾನ್, ಡ್ರ್ಯಾಗನ್ ಫ್ರೂಟ್, ಲೋಂಗನ್, ಲಿಚಿ ಹಾಗೂ ಜಾಕ್ ಫ್ರೂಟ್ ಪ್ರಮುಖ ಬೆಳೆಗಳಾಗಿವೆ.

ಪ್ಯಾಶನ್ ಫ್ರೂಟ್ ಬೆಳೆಗೆ ಹೆಚ್ಚಿನ ಒತ್ತು ನೀಡಿದ್ದು, ಇಡೀ ದೇಶದಲ್ಲಿ ಈ ಹಣ್ಣಿನ ಒಟ್ಟು ಉತ್ಪಾದನೆಯಲ್ಲಿ ಇವರ ಕೊಡುಗೆ ಶೇ.10 ಆಗಿದೆ. ಏಲಕ್ಕಿ, ಜಾಯಿಕಾಯಿ, ಲವಂಗ, ದಾಲ್ಚಿನ್ನಿ ಮುಂತಾದ ಬೆಳೆಗಳು ನಿಯಮಿತ ಆದಾಯ ತಂದುಕೊಡುತ್ತವೆ. 50 ತಳಿಯ ಕಾಳು ಮೆಣಸು ಬೆಳೆಯುತ್ತಿದ್ದಾರೆ. ಇದರಲ್ಲಿ ನಾಲ್ಕು ವಿಶಿಷ್ಟ ಕರಿಮೆಣಸು ತಳಿಗಳನ್ನು ಸಂರಕ್ಷಣೆ ಮಾಡಿದ್ದು, ಭಾರತ ಸರಕಾರದ ಅಡಿಯಲ್ಲಿ ನೋಂದಣಿ ಮಾಡಿಸಿದ್ದಾರೆ. ಸಾವಯವ ಕೃಷಿಗೂ ಇವರು ಹೆಚ್ಚಿನ ಒತ್ತು ಕೊಟ್ಟಿದ್ದಾರೆ.

ದುಡಿಮೆಯ ಫಲ: ಮಿಶ್ರ ಬೆಳೆಗೆ ಒತ್ತು ನೀಡಿದ ಪರಿಣಾಮ ಕೃಷಿಯು ನಿರಂತರ ಕೈಹಿಡಿದಿದೆ. ಎಕರೆಗೆ ವಾರ್ಷಿಕ 3ರಿಂದ 5 ಲಕ್ಷ ರೂ. ಆದಾಯ ಬರುತ್ತದೆ. ಪ್ಯಾಶನ್ ಫ್ರೂಟ್ ಎಕರೆಗೆ ವಾರ್ಷಿಕ 5ರಿಂದ 10 ಟನ್, ರಾಂಬುಟಾನ್ 3ರಿಂದ 5 ಟನ್, ಮ್ಯಾಂಗೊಸ್ಟೀನ್ 2ರಿಂದ 3 ಟನ್, ದೂರಿಯಾನ್, ಅವಕಾಡು ತಲಾ 10 ಟನ್, ಡ್ರ್ಯಾಗನ್ ಫ್ರೂಟ್ 10 ರಿಂದ 15 ಟನ್, ಹಲಸು 25 ಟನ್ ವರೆಗೆ ಇಳುವರಿ ಬರುತ್ತದೆ. ಹಲಸನ್ನು ಹಣ್ಣು ಮತ್ತು ಕಾಯಿ ಹಂತದಲ್ಲಿ ಪ್ರತ್ಯೇಕ ಕತ್ತರಿಸಿ ಪ್ಯಾಕ್ ರೂಪದಲ್ಲಿ ಮಾರಾಟ ಮಾಡಲಾಗುತ್ತದೆ.

ಕಾಳು ಮೆಣಸು

ಡ್ರ್ಯಾಗನ್ ಫ್ರೂಟ್.

ಪ್ಯಾಶನ್ ಫ್ರೂಟ್

ಮೇಘಾಲಯದಲ್ಲಿ ಕೃಷಿ

ಜೋಮಿ ಮ್ಯಾಥ್ಯೂ ಅವರು ಈಶಾನ್ಯ ರಾಜ್ಯಗಳಲ್ಲಿ ಒಂದಾದ ಮೇಘಾಲಯದಲ್ಲಿ 100 ಎಕರೆಯಷ್ಟು ತೋಟ ನಿರ್ವಹಿಸುತ್ತಿದ್ದಾರೆ. ಅಲ್ಲಿನ ಸರಕಾರದ ನೀತಿಗಳ ಅಡಿಯಲ್ಲಿ ಸೌಲಭ್ಯ ಪಡೆದು ವಿರಳ ಜಾತಿಯ ಹಣ್ಣುಗಳು, ಸಂಬಾರ ಬೆಳೆ ಬೆಳೆಯುತ್ತಿದ್ದಾರೆ. ಮೇಘಾಲಯದಲ್ಲಿ ಬೆಳೆದ ಹಣ್ಣುಗಳು ಫ್ರೂಟ್ಸ್ ವ್ಯಾಲಿ ಮೂಲಕ ಮಾರಾಟವಾಗುತ್ತವೆ.

ಅರಸಿ ಬಂದ ಪ್ರಶಸ್ತಿಗಳು

ಇಂಡೋನೇಷ್ಯಾದ ಜಕಾರ್ತದಿಂದ ಕೊಡ ಮಾಡುವ ಅಂತಾರಾಷ್ಟ್ರೀಯ ಕಾಳು ಮೆಣಸು ಸಮುದಾಯದ ಅತ್ಯುತ್ತಮ ಕಾಳು ಮೆಣಸು ಬೆಳೆಗಾರ ಪ್ರಶಸ್ತಿ, 2021ರ ಸ್ಪೈಸ್ ಎಕ್ಸಲೆನ್ಸ್ ಅವಾರ್ಡ್, ಬೆಸ್ಟ್ ಇನ್ನೋವೇಟಿವ್ ಫಾರ್ಮರ್ ಅವಾರ್ಡ್, ಸುಗಂಧಶ್ರೀ ಮುಂತಾದ ಪ್ರಶಸ್ತಿ ಲಭಿಸಿವೆ.

ಮಾರಾಟ ವ್ಯವಸ್ಥೆ

ಹಣ್ಣುಗಳ ಮಾರಾಟಕ್ಕೆಂದೇ ಜೋಮಿ ಮ್ಯಾಥ್ಯೂ ಅವರು ಫ್ರೂಟ್ಸ್ ವ್ಯಾಲಿ ಎಂಬ ರೈತ ಉತ್ಪಾದಕ ಕಂಪನಿ ಸ್ಥಾಪಿಸಿದ್ದು, ಇದರ ಮೂಲಕ ಇಡೀ ದೇಶದಲ್ಲಿ ಮಾರುಕಟ್ಟೆ ಸೃಜಿಸಿಕೊಂಡಿದ್ದಾರೆ. ಸ್ವತಃ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಿದ್ದು, ದಕ್ಷಿಣ ಭಾರತದ 290 ಸದಸ್ಯ ಕೃಷಿಕರು ಈ ಸಂಸ್ಥೆ ಜತೆಗೆ ಕೈಜೋಡಿಸಿದ್ದಾರೆ. ಬೆಳೆದ ಹಣ್ಣಿನಲ್ಲಿ ಶೇ. 95ರಷ್ಟು ಫ್ರೂಟ್ಸ್ ವ್ಯಾಲಿ ಮೂಲಕವೇ ದೇಶದ ಮಾರುಕಟ್ಟೆಗಳಿಗೆ ಸರಬರಾಜಾಗುತ್ತದೆ.

ಬೆಳೆಗೆ ಬಯೋಚಾರ್ ಯುಕ್ತ ಮಣ್ಣಿನ ಪ್ರಯೋಗ

ಬಯೋಚಾರ್ ಯುಕ್ತ ಮಣ್ಣಿನಲ್ಲಿ ಗಿಡಗಳು ಸಾಕಷ್ಟು ಚೆನ್ನಾಗಿ ಬೆಳೆಯುವುದನ್ನು ಹಲವಾರು ಪ್ರಯೋಗಗಳ ಮೂಲಕ ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರದ ಹಾಲ್ಕಣಿಯ ಕೃಷಿಕ ಎಸ್.ಜಿ ಹೆಗಡೆ ಕಂಡು ಕೊಂಡಿದ್ದಾರೆ. ಬಯೋಚಾರ್ ಗೊಬ್ಬರವಲ್ಲ. ಆದರೂ ಅದರಲ್ಲಿ ಹಲವು ಸಸ್ಯ ಪೋಷಕಗಳಿದ್ದು, ಶಾಶ್ವತ ಮಣ್ಣು ಸುಧಾರಕವಾಗಿದೆ. ಇದನ್ನು ಮಣ್ಣಿಗೆ ಸೇರಿಸುವುದರಿಂದ ಮಣ್ಣಿನಲ್ಲಿ ತೇವಾಂಶ ದೀರ್ಘ ಕಾಲ ಇರುತ್ತದೆ. ಮಣ್ಣಿನಲ್ಲಿ ಗಾಳಿಯಾಡುವಿಕೆ ಹೆಚ್ಚಾಗಿ ಬೇರುಗಳ ಬೆಳವಣಿಗೆ, ಗಿಡಗಳ ಆರೋಗ್ಯ ವೃದ್ಧಿಸುತ್ತದೆ. ಮಣ್ಣಿಗೆ ಸೇರಿಸಿದ ಬಯೋಚಾರ್ ಉಪಯುಕ್ತ ಸೂಕ್ಷ್ಮಾಣು ಜೀವಿಗಳಿಗೆ ಶಾಶ್ವತ ಆವಾಸ ಸ್ಥಾನವಾಗುತ್ತದೆ. ಇದ್ದಿಲಿನ ಪುಡಿಗೆ ಉಪಯುಕ್ತ ಜೀವಾಣುಗಳು, ಪೋಷಕಾಂಶಗಳು ಸೇರಿದಾಗ ಮಾತ್ರ ಅದು ಬಯೋಚಾರ್ ಎನಿಸಿಕೊಳ್ಳುತ್ತದೆ. ಅದಕ್ಕಾಗಿ ಅದನ್ನು ಉಪಚಾರ ಮಾಡುವುದು ಸಹ ಮುಖ್ಯ. ಬಯೋಚಾರ್ ಅನ್ನು ಸಕ್ರಿಯಗೊಳಿಸಲು ಜೀವಾಮೃತ ಪ್ರಯೋಜನಕಾರಿ. ಅಂದರೆ ಚಾರ್ ಕೋಲ್ ಪೌಡರ್ ಅನ್ನು ಜೀವಾಮೃತದ ಜತೆಗೆ ಸೇರಿಸಿ, ಜೀವಾಣು ವೃದ್ಧಿಸಿ ಹಾಕುವುದು. ಇದಲ್ಲದೆ ಹಸಿರೆಲೆ ದ್ರವ ಗೊಬ್ಬರ ಬಳಸಿ ಸಹ ಬಯೋಚಾರ್ ಅನ್ನು ಉಪಚರಿಸಬಹುದು. OWDC ದ್ರಾವಣ, ಟೈಕೊಡರ್ಮಾ, ಸುಡೋಮೊನಾಸ್ ಸೇರಿಸಿದ ನೀರು... ಬಳಸಿ ಬಯೋಚಾರ್ ಚಾರ್ಜ್ ಮಾಡಬಹುದು. ಬಯೋಚಾರ್ ಅನ್ನು ಕೊನೇ ಪಕ್ಷ ನೀರಿನಲ್ಲಿ ನೆನೆಸಿ ಬಳಸುವುದು ಒಳ್ಳೆಯದು. ಬಯೋಚಾರ್ ಬಳಸಲು ಪ್ರಾರಂಭಿಸಿದ ನಂತರ ಕ್ರಮೇಣ ಮಣ್ಣಿನ ರಸಸಾರದ ಮಟ್ಟವು ಬಹುತೇಕ ಶಾಶ್ವತವಾಗಿ ತಟಸ್ಥಸ್ಥಿತಿಯನ್ನು ತಲುಪುತ್ತದೆ. ಹೆಚ್ಚಿನ ಮಾಹಿತಿಗೆ ಮೊ. 94492 00578

- ಸ್ವರೂಪ್ ಕೊಟ್ಟೂರು

ವಿಕ ಬೇಸಾಯದ ಶ್ರಮನೀಗಿಸುವ ಯಂತ್ರ

ದೇಸಿ ನಿಂಬೆ 7 ಆರೋಗ್ಯದ ರೆಂಬೆ

ನಿಂಬೆಹಣ್ಣಿನ ಒಂದು ಹನಿ, ಸಪ್ಪೆಯಾದ ಊಟವನ್ನೂ ರುಚಿಕರ ಮಾಡುತ್ತದೆ. ಹಿಮಾಲಯದ ತಪ್ಪಲಿನಲ್ಲಿ ಹುಟ್ಟಿದ ಈ ಸಣ್ಣ ಹಣ್ಣು ಇಂದಿಗೆ ಪ್ರಪಂಚದ ಅಡುಗೆ ಮನೆಗಳ ಹೃದಯವನ್ನೇ ಗೆದ್ದಿದೆ. ರುಚಿಗೆ ಮಾತ್ರವಲ್ಲ ಆರೋಗ್ಯಕ್ಕೂ ಇದು ಅಮೃತ ಮನೆಯ ವೈದ್ಯ. ನಿಂಬೆಹಣ್ಣು ಕೃಷಿ ಅಲ್ಪ ಹೂಡಿಕೆ, ಹೆಚ್ಚು ಲಾಭ, ನಿರಂತರ ಬೇಡಿಕೆ ಇರುವ ಬೆಳೆಯಾಗಿದೆ. ಸರಿಯಾದ ಜಾತಿ, ನೀರಾವರಿ, ಗೊಬ್ಬರ ವ್ಯವಸ್ಥೆ ಮಾಡಿದರೆ ಇದು ಅತ್ಯುತ್ತಮ ದೀರ್ಘಕಾಲಿಕ ತೋಟಗಾರಿಕಾ ಬೆಳೆ. ಕರ್ನಾಟಕದ ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಬಳ್ಳಾರಿ, ವಿಜಯಪುರ, ಕಲಬುರಗಿ ಕಡೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ರಾಜ್ಯದ ಮನೆ ಕೈತೋಟಗಳಲ್ಲೂ ನಿಂಬೆ ಸಾಮಾನ್ಯವಾಗಿ ಬೆಳೆಯುತ್ತಾರೆ. ನಿಂಬೆಹಣ್ಣು ಒಣ ಪ್ರದೇಶ, ಮಧ್ಯಮ ನೀರಾವರಿ, ಗುಡ್ಡ ಪ್ರದೇಶ-ಎಲ್ಲೆಡೆ ಚೆನ್ನಾಗಿ ಬೆಳೆ ಯುತ್ತದೆ.

ವಾರ್ಷಿಕವಾಗಿ 2-3 ಬಾರಿ ಹಣ್ಣು ಬೆಳೆಯ ಬಹು ದಾಗಿದ್ದು, ಮಾರುಕಟ್ಟೆಯಲ್ಲಿ ವರ್ಷಪೂರ್ತಿ ಬೇಡಿಕೆ ಇದೆ. ಸೀಡ್‌ಲೆಸ್ ಲಿಂಬೆ ಕೂಡ ಪೈಪೋಟಿ ಮಾಡುತ್ತಿದೆ. ಕಡಿಮೆ ಕೀಟ ರೋಗವಿದೆ. 1 ಎಕರೆಗೂ ಸರಾಸರಿ 8-12 ಟನ್ ಉತ್ಪಾದನೆ ಮಾಡಬಹುದು.

ಹೂಡಿಕೆ: 40,000 - 70,000 ಮಾಡಿ 1.5 ಲಕ್ಷ - 3 ಲಕ್ಷ ವರ್ಷದ ಆದಾಯ ಪಡೆಯಬಹುದು.

ಆರೋಗ್ಯಕ್ಕೆ ಸಹಕಾರಿ: ಹೃದಯ ರೋಗ ಮತ್ತು ಪಾರ್ಶ್ವವಾಯು, ಕೊಲೆಸ್ಟ್ರಾಲ್ ಅಪಾಯ ಕಡಿಮೆ ಮಾಡುತ್ತವೆ. ಜೀರ್ಣಕ್ರಿಯೆ ಸರಾಗಗೊಳಿಸುತ್ತದೆ. ಬೆಳಗ್ಗೆ ಬಿಸಿ ನೀರಿನಲ್ಲಿ ನಿಂಬೆ-ಮಲಬದ್ಧತೆಗೆ ಅತಿ ಸುಲಭ ಪರಿಹಾರವಾಗಿದೆ. ಶೀತ-ಜ್ವರದ ಕಾಲದಲ್ಲಿ ನಿಂಬೆ ಕವಚವಿದ್ದಂತೆ. ಕೊಬ್ಬನ್ನು ನಿಯಂತ್ರಿಸಿ ತೂಕವನ್ನೂ ತಗ್ಗಿಸುತ್ತದೆ. ಸಿಟ್ರಿಕ್ ಆಮ್ಲವು ಮೂತ್ರದ ಆಮ್ಲೀಯತೆ ಕಡಿಮೆ ಮಾಡುತ್ತದೆ. ಸಣ್ಣ ಕಲ್ಲುಗಳನ್ನು ಒಡೆಯುವ ಸಾಮರ್ಥ್ಯವೂ ಇದೆ. ಸ್ಯಾಹಾರದಲ್ಲಿರುವ ಕಬ್ಬಿಣವನ್ನು ದೇಹಕ್ಕೆ ಸುಲಭವಾಗಿ ಹೀರಿಕೊಳ್ಳಲು ಸಹಾಯ ಮಾಡುತ್ತದೆ. ವಿಶೇಷವಾಗಿ ಸ್ಯಾಹಾರಿಗಳಿಗೆ ಅಮೂಲ್ಯ. ಕ್ಯಾನ್ಸರ್ ವಿರೋಧಿ ಗುಣಗಳನ್ನು ಹೊಂದಿದೆ. ನಿಂಬೆ ಪಿಕಲ್, ಜ್ಯೂಸ್, ಸಿರಪ್, ಒಣಗಿದ ನಿಂಬೆ, ನಿಂಬೆ ಪೌಡರ್ ಆಗಿ ಸಂಸ್ಕರಣೆ ಮಾಡಬಹುದಾಗಿದೆ.

-ಎಂಪಿಎಂ ವೀರೇಶ ಯರಬಾಳು

ಬೊಗಸೆಯಲ್ಲಿ ನಾಟಿ ಬೀಜ ಭಂಡಾರ

ಹಣ್ಣು-ತರಕಾರಿಗಳ ನಿರ್ಜಲೀಕರಣ

ಹಣ್ಣು ತರಕಾರಿಯಲ್ಲಿ ನೀರಿನ ಅಂಶ ಹೆಚ್ಚಿರುವುದರಿಂದ ಬೇಗನೆ ಹಾಳಾಗುತ್ತದೆ. ಈ ನಷ್ಟವನ್ನು ತಪ್ಪಿಸಲು ಮತ್ತು ಉತ್ಪನ್ನ ಗಳನ್ನು ದೀರ್ಘಾವಧಿಗೆ ಸಂರಕ್ಷಿಸಲು ನಿರ್ಜಲೀಕರಣವು ಅತ್ಯಂತ ಪರಿಣಾಮಕಾರಿ ವಿಧಾನವಾಗಿದೆ. ಹಣ್ಣು ಮತ್ತು ತರಕಾರಿಯ ಶೇಖರಣಾವದಿ ಹೆಚ್ಚಿಸಲು ಇರುವ ಸುಲಭ ಮಾರ್ಗ ಎಂದರೆ ನಿರ್ಜಲೀಕರಣ. ಇದು ಆಹಾರದಲ್ಲಿರುವ ನೀರಿನ ಅಂಶವನ್ನು ನಿಯಂತ್ರಿತ ರೀತಿಯಲ್ಲಿ ತೆಗೆದುಹಾಕಿ ಅವುಗಳನ್ನು ದೀರ್ಘಕಾಲ ಸಂರಕ್ಷಿಸುವ ವಿಧಾನ. ನೀರಿನ ಅಂಶ ಕಡಿಮೆಯಾದಾಗ ಬ್ಯಾಕ್ಟೀರಿಯಾ, ಫಂಗಸ್ ಮುಂತಾದ ಸೂಕ್ಷ್ಮಜೀವಿಗಳ ಬೆಳವಣಿಗೆ ತಡೆಯಲ್ಪಡುವುದರಿಂದ ಆಹಾರ ಹಾಳಾಗುವುದಿಲ್ಲ. ಇದರಿಂದ ರೈತರಿಗೆ ಹೆಚ್ಚು ದಿನ ಸಂಗ್ರಹಿಸಿ ಮಾರುಕಟ್ಟೆ ಮಾಡಬಹುದಾದ ಮೌಲ್ಯವರ್ಧಿತ ಉತ್ಪನ್ನಗಳು ಸಿಗುತ್ತವೆ. ನಿರ್ಜಲೀಕೃತ ಆಹಾರ ಪದಾರ್ಥಗಳ ತೂಕ ಹಾಗೂ ಗಾತ್ರ ಕಡಿಮೆಯಾಗುವುದರಿಂದ ಸಾಗಣೆ ಮತ್ತು ಸಂಗ್ರಹಣೆ ಸುಲಭ. ಈ ಉತ್ಪನ್ನಗಳನ್ನು ವರ್ಷಪೂರ್ತಿ ಬಳಸುವ ಅವಕಾಶ ದೊರೆಯುತ್ತದೆ.

ವಿಕ ಕೃಷಿ ಕೋಶ

ನಿರ್ಜಲೀಕರಣಕ್ಕೆ ಮೂರು ವಿಧಾನ: ಪರಂಪರೆಯ ಸೂರ್ಯ ಬಿಸಿಲಿನಲ್ಲಿ ಒಣಗಿಸುವ ವಿಧಾನ, ಯಾಂತ್ರಿಕ ಹಾಟ್-ಏರ್ ಡ್ರೈಯರ್‌ಗಳ ಬಳಕೆ ಮತ್ತು ಅತ್ಯಾಧುನಿಕ ಫ್ರೀಜ್ ಡ್ರೈಯಿಂಗ್ ತಂತ್ರಜ್ಞಾನ. ಯಾಂತ್ರಿಕ ಮತ್ತು ಫ್ರೀಜ್ ಡ್ರೈಯಿಂಗ್ ವಿಧಾನಗಳಲ್ಲಿ ಉತ್ಪನ್ನದ ಬಣ್ಣ, ವಾಸನೆ ಮತ್ತು ಪೋಷಕಾಂಶ ಉತ್ತಮವಾಗಿ ಉಳಿಯುತ್ತವೆ. ಕ್ಯಾರೆಟ್, ಬೀನ್ಸ್, ಬೀಟ್ರೂಟ್, ಈರುಳ್ಳಿ, ಮುಂತಾದ ತರಕಾರಿಗಳು ಹಾಗೂ ಮಾವು, ಬಾಳೆ, ದ್ರಾಕ್ಷಿ, ಪಪಾಯಿ, ನೆಲ್ಲಿಕಾಯಿ ಮುಂತಾದ ಹಣ್ಣುಗಳು ನಿರ್ಜಲೀಕರಣಕ್ಕೆ ಅತ್ಯಂತ ಸೂಕ್ತ ಹಾಗೂ ಈ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಇದೆ. ನಿರ್ಜಲೀಕರಣದ ಹಂತಗಳಲ್ಲಿ ತೊಳೆ ಯುವಿಕೆ, ಕತ್ತರಿಸುವಿಕೆ, ಬ್ಲಾಂಚಿಂಗ್, ಸೂಕ್ತ ತಾಪಮಾನ ದಲ್ಲಿ ಒಣಗಿಸುವಿಕೆ ಮತ್ತು ಆರ್ದ್ರತೆ ರಹಿತ ಪ್ಯಾಕಿಂಗ್ ಒಳಗೊಂಡಿ ರುತ್ತದೆ. ಮಾರುಕಟ್ಟೆ ಬೆಲೆ ಕುಸಿತದಲ್ಲೂ ರೈತರಿಗೆ ನಷ್ಟ ತಪ್ಪಿಸಿ ಹೆಚ್ಚುವರಿ ಆದಾಯಕ್ಕೆ ಈ ತ